**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 72 ಇಎಸ್‌ಟಿ 4(ಬಿ) 2016 /6111

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560 001
ದಿನಾಂಕ: 03-03-2017

**ಹಿಂಬರಹ**

ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ **ಕೆ.ಹೆಚ್.ಕೆ. ಪಾಲಿಟೆಕ್ನಿಕ್ (ಅನುದಾನಿತ), ಧಾರವಾಡ** ಈ ಸಂಸ್ಥೆಯಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದಲ್ಲಿ ಪ್ರಸ್ತುತ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ (1) **ಶ್ರೀಮತಿ ಕೆ.ಎಂ. ರಾಯ್ಕುರ್** ಮತ್ತು (2) **ಶ್ರೀಮತಿ ಎಂ. ಪ್ರತಿಮಾ** ಇವರುಗಳನ್ನು ಸಹಾಯಕ ಉಪನ್ಯಾಸಕರ ಹುದ್ದೆಯಿಂದ ಉಪನ್ಯಾಸಕರ (ಗ್ರೂಪ್-ಬಿ) ಹುದ್ದೆಗೆ ಮೇಲ್ದರ್ಜೆಗೇರಿಸಿ, ಎಐಸಿಟಿಇ ವೇತನ ಶ್ರೇಣಿಯನ್ನು ನಿಗದಿಪಡಿಸಿರುವ **ಸರ್ಕಾರದ ಆದೇಶ ಸಂಖ್ಯೆ: ಇಡಿ 142 ಟಿಪಿಇ 2016, ದಿನಾಂಕ: 25.02.2017ರ** ಪ್ರತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ/ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು (ಎ&ಇ, ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2), ಕರ್ನಾಟಕ, ಬೆಂಗಳೂರು.
2. ಜಂಟಿ ನಿರ್ದೇಶಕರು (ಆಡಳಿತ)/(ಪರೀಕ್ಷೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಪ್ರಾಂಶುಪಾಲರು, ಕೆ.ಹೆಚ್.ಕೆ. (ಅನುದಾನಿತ), ಪಾಲಿಟೆಕ್ನಿಕ್, ದಾರವಾಡ
4. ಸಂಬಂಧಿಸಿದ ಉಪನ್ಯಾಸಕರುಗಳಿಗೆ (ಪ್ರಾಂಶುಪಾಲರ ಮುಖಾಂತರ).
5. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6. ನಿರ್ದೇಶಕರವರ ಆಪ್ತ ಶಾಖೆಗೆ,
7. ಡಿವಿಪಿ(1) ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
8. ಶಾಖಾ ರಕ್ಷಾ ಕಡತ / ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಕೆ ಹೆಚ್ ಕೆ ಅನುದಾನಿತ ಪಾಲಿಟೆಕ್ನಿಕ್, ಧಾರವಾಡ ಈ ಸಂಸ್ಥೆಯ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ ಸಹಾಯಕ ಉಪನ್ಯಾಸಕರಿಗೆ ಸ್ನಾತಕೋತ್ತರ ಪದವಿ ಪಡೆದ ದಿನಾಂಕದಿಂದ ಅನ್ವಯಿಸುವಂತೆ ರಾಜ್ಯ ವೇತನ ಶ್ರೇಣಿಯಲ್ಲಿ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಿ, ಎಐಸಿಟಿಇ ವೇತನ ಶ್ರೇಣಿಯನ್ನು ಮುಂದುವರೆಸುವ ಬಗ್ಗೆ-

**ಓ ದ ಲಾ ಗಿ ದೆ:**

1) ಸರ್ಕಾರದ ಆದೇಶ ಸಂಖ್ಯೆ: ಇಡಿ 241 ಟಿಪಿಇ 1982, ದಿನಾಂಕ; 11-06-1986
2) ಸರ್ಕಾರದ ಆದೇಶ ಸಂಖ್ಯೆ: ಇಡಿ 241 ಟಿಪಿಇ 1982, ದಿನಾಂಕ;09-09-1986
3) ಸರ್ಕಾರದ ಆದೇಶ ಸಂಖ್ಯೆ: ಇಡಿ 319 ಟಿಪಿಇ 2005, ದಿನಾಂಕ; 17-03-2007
4) ಸರ್ಕಾರದ ಪತ್ರ ಸಂಖ್ಯೆ: ಇಡಿ 319 ಟಿಪಿಇ 05(ಭಾ), ದಿನಾಂಕ;21-04-2008
5) ಸರ್ಕಾರದ ಆದೇಶ ಸಂಖ್ಯೆ: ಇಡಿ 319 ಟಿಪಿಇ 05, ದಿನಾಂಕ; 18-06-2008
6) ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, 1974 ಮತ್ತು 1987
7) ಸರ್ಕಾರದ ಆದೇಶ ಸಂಖ್ಯೆ: ಇಡಿ 79 ಡಿಟಿಇ 1991, ದಿನಾಂಕ; 18-07-1994
8) ಸರ್ಕಾರದ ಆದೇಶ ಸಂಖ್ಯೆ: ಇಡಿ 39 ಡಿಟಿಇ 2004, ದಿನಾಂಕ; 18-05-2005
9) ಸರ್ಕಾರದ ಆದೇಶ ಸಂಖ್ಯೆ:ಇಡಿ 15 ಡಿಟಿಇ 2000, ದಿನಾಂಕ;28-07-2000
10) ಸರ್ಕಾರದ ಆದೇಶ ಸಂಖ್ಯೆ: ಇಡಿ 77 ಡಿಟಿಇ 2003(1), ದಿನಾಂಕ; 22-11-2006
11) ತಾಂತ್ರಿಕ ಶಿಕ್ಷಣ ನಿರ್ದೇಶಕರ ಕಚೇರಿ ಆದೇಶ ಸಂಖ್ಯೆ: ಡಿಟಿಇ 53 ಎಸ್‌ಟಿ 4(ಬಿ) 2008, ದಿನಾಂಕ: 12-01-2009
12) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ 72 ಇಎಸ್‌ಟಿ 4(ಬಿ) 2016, ದಿನಾಂಕ:22-10-2016.

EST(4)B

**ಪ್ರ ಸ್ತಾ ವ ನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಸರ್ಕಾರಿ ಆದೇಶದಲ್ಲಿ ಸಹಾಯಕ ಉಪನ್ಯಾಸಕರ ಹುದ್ದೆಗಳನ್ನು ಉಪನ್ಯಾಸಕರ ಹುದ್ದೆಗೆ ಕೆಳಕಂಡ ಮಾನದಂಡಗಳನ್ನು ಅಳವಡಿಸಿ ಮೇಲ್ದರ್ಜೆಗೇರಿಸಲಾಗಿದೆ.

(1) ತಾಂತ್ರಿಕ ವಿಷಯಗಳ ಸಹಾಯಕ ಉಪನ್ಯಾಸಕರು ತಾಂತ್ರಿಕ ವಿಷಯದಲ್ಲಿ ಪದವಿ ಹೊಂದಿದ್ದಲ್ಲಿ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಬಹುದು.

(2) ಮೇಲ್ಕಂಡ ಅರ್ಹತೆಯನ್ನು ಭವಿಷ್ಯದಲ್ಲಿ ಹೊಂದಿದವರನ್ನೂ ಸಹ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಬಹುದು.

2) ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಸರ್ಕಾರಿ ಆದೇಶದಲ್ಲಿ ಮೇಲ್ಕಂಡ ದಿ:11-06-1986ರ ಆದೇಶವನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ. ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸುವಲ್ಲಿ, ಸಹಾಯಕ ಉಪನ್ಯಾಸಕರು

(1) ತಾಂತ್ರಿಕ ವಿಷಯದಲ್ಲಿ ಪದವಿ ಹೊಂದಿರಬೇಕು ಅಥವಾ

ಪುಟ-2ಕ್ಕೆ

(2)ತಾಂತ್ರಿಕ ವಿಷಯದ ಡಿಪ್ಲೋಮಾದಲ್ಲಿ 2ನೇ ದರ್ಜೆ ಮತ್ತು ಟಿ ಟಿ ಟಿ ಐ ಡಿಪ್ಲೋಮಾ ಮತ್ತು 5 ವರ್ಷಗಳ ಸೇವಾ / ಬೋಧನಾ ಅನುಭವ ಹೊಂದಿರಬೇಕು ಅಥವಾ

(3)ಎ ಎಂ ಐ ಇ (ಪರೀಕ್ಷೆಯ ಮೂಲಕ) ಮತ್ತು 2 ವರ್ಷಗಳ ಸೇವಾ / ಬೋಧನಾ ಅನುಭವ ಇರಬೇಕು

ಮೇಲ್ಕಂಡ ಅರ್ಹತೆಯನ್ನು ಭವಿಷ್ಯದಲ್ಲಿ ಹೊಂದಿದಲ್ಲಿ ಅವರನ್ನೂ ಸಹ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಬೇಕು

3) ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಸರ್ಕಾರಿ ಆದೇಶದಲ್ಲಿ ಪಾಲಿಟೆಕ್ನಿಕ್‌ನ ತಾಂತ್ರಿಕೇತರ ವಿಭಾಗಗಳಾದ ಕಮರ್ಷಿಯಲ್ ಪ್ರಾಕ್ಟೀಸ್, ಸಿ ಡಿ ಡಿ ಎಂ, ಗ್ರಂಥಾಲಯ ವಿಭಾಗಗಳಲ್ಲಿನ ಸಹಾಯಕ ಉಪನ್ಯಾಸಕರನ್ನು ಆಯಾಯ ಹುದ್ದೆಗಳೊಂದಿಗೆ ಉಪನ್ಯಾಸಕರ ಹುದ್ದೆಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಮೇಲ್ದರ್ಜೆಗೇರಿಸಲಾಗಿದೆ.

(1) ದ್ವಿತೀಯ ದರ್ಜೆ ಸ್ನಾತಕೋತ್ತರ ಪದವಿ / ದ್ವಿತೀಯ ದರ್ಜೆ ಪದವಿ ಮತ್ತು ದ್ವಿತೀಯ ದರ್ಜೆ ಡಿಪ್ಲೋಮಾ ಹೊಂದಿರಬೇಕು.

(2)5 ವರ್ಷಗಳ ಸೇವೆ ಸಲ್ಲಿಸಿರಬೇಕು

ಮೇಲ್ಕಂಡ ಅರ್ಹತೆಯನ್ನು ಭವಿಷ್ಯದಲ್ಲಿ ಹೊಂದಿದಲ್ಲಿ ಅವರನ್ನೂ ಸಹ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಬೇಕು.

4) ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿನ ಸರ್ಕಾರಿ ಪತ್ರದಲ್ಲಿ ಮೇಲ್ಕಂಡ ದಿನಾಂಕ: 17-03-2007 ರ ಆದೇಶವು ಆದೇಶ ಹೊರಡಿಸಿದ ದಿನಾಂಕದಿಂದ ಅಂದರೆ ದಿನಾಂಕ; 17-03-2007 ರಿಂದ ಜಾರಿಗೆ ಬರುತ್ತದೆ ಎಂದು ಸ್ಪಷ್ಟೀಕರಿಸಲಾಗಿದೆ ಮತ್ತು ಮೇಲ್ದರ್ಜೆಗೇರಿಸಿದ ಉಪನ್ಯಾಕರ ಹುದ್ದೆಗೆ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿದೆ ಮತ್ತು ಮೇಲ್ದರ್ಜೆಗೇರಿಸಲ್ಪಟ್ಟ ದಿನಾಂಕದಿಂದ ಆರ್ಥಿಕ ಸೌಲಭ್ಯವು ಜಾರಿಗೆ ಬರುತ್ತದೆ ಎಂದು ತಿಳಸಲಾಗಿದೆ.

5) ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿನ ಸರ್ಕಾರಿ ಆದೇಶದಲ್ಲಿ ಒಂದು ಬಾರಿಯ ಕ್ರಮವಾಗಿ, ತಾಂತ್ರಿಕೇತರ ವಿಭಾಗದ 45 ಸಹಾಯಕ ಉಪನ್ಯಾಸಕರನ್ನು ರಾಜ್ಯ ವೇತನ ಶ್ರೇಣಿಯಲ್ಲಿ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ.

6) ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿನ 1974 ಮತ್ತು 1987 ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಾಂತ್ರಿಕ ವಿಭಾಗದ ಉಪನ್ಯಾಸಕರ ಹುದ್ದೆಗೆ ಬಿ.ಇ ಪದವಿಯನ್ನು ವಿದ್ಯಾರ್ಹತೆಯನ್ನಾಗಿ ನಿಗಧಿಪಡಿಸಿದೆ. ಆದರೆ. ತಾಂತ್ರಿಕೇತರ ವಿಭಾಗದ ಉಪನ್ಯಾಸಕರ ಹುದ್ದೆಗೆ ಎಂ.ಕಾಂ / ಎಂ.ಲೈಬ್ರರಿ ಸೈನ್ಸ್ ನಲ್ಲಿ ಸ್ನಾತಕೋತ್ತರ ಪದವಿಯನ್ನು ವಿದ್ಯಾರ್ಹತೆಯನ್ನಾಗಿ ನಿಗಧಿಪಡಿಸಿದೆ.

7) ಮೇಲೆ ಓದಲಾದ ಕ್ರಮ ಸಂಖ್ಯೆ (7) ರಲ್ಲಿನ ಸರ್ಕಾರಿ ಆದೇಶದಲ್ಲಿ 1986 ರ ಎಐಸಿಟಿಇ ವೇತನ ಶ್ರೇಣಿಯನ್ನು ದಿನಾಂಕ: 01-04-1993 ರಿಂದ ಜಾರಿಗೆ ಬರುವಂತೆ ಪಾಲಿಟೆಕ್ನಿಕ್ ಬೋಧಕ

ಪುಟ-3ಕ್ಕೆ

ವೃಂದಕ್ಕೆ ವಿಸ್ತರಿಸಲಾಗಿದೆ. ಇದರಲ್ಲಿ, ಈಗಾಗಲೆ ಸೇವೆಯಲ್ಲಿರುವ ಕೆಳಕಂಡವರು ಎಐಸಿಟಿಇ ವೇತನ ಶ್ರೇಣಿಗೆ ಅರ್ಹರಾಗಿರುತ್ತಾರೆ.

(1) ತಾಂತ್ರಿಕ ವಿಷಯಗಳ ಉಪನ್ಯಾಸಕರು ದ್ವಿತೀಯ ದರ್ಜೆ ಪದವಿಯನ್ನು ಹೊಂದಿದ್ದಲ್ಲಿ ಮತ್ತು

(2) ತಾಂತ್ರಿಕೇತರ ವಿಷಯಗಳ ಉಪನ್ಯಾಸಕರು ದ್ವಿತೀಯ ದರ್ಜೆ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದಲ್ಲಿ

8) ಮೇಲೆ ಓದಲಾದ ಕ್ರಮ ಸಂಖ್ಯೆ (8) ರಲ್ಲಿನ ಸರ್ಕಾರಿ ಆದೇಶದಲ್ಲಿ ದಿನಾಂಕ: 01-04-1993 ರ ಪೂರ್ವದಲ್ಲಿ ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದ 3 ಉಪನ್ಯಾಸಕರು ಸ್ನಾತಕೋತ್ತರ ಪದವಿಯನ್ನು ಪಾಸ್ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವ ಪ್ರಯುಕ್ತ, 1986 / 1996 ರ ಎಐಸಿಟಿಇ ವೇತನ ಶ್ರೇಣಿಯನ್ನು ದಿನಾಂಕ: 01-04-1993 ರಿಂದ ಕಾಲ್ಪನಿಕವಾಗಿ ವಿಸ್ತರಿಸಲು ಅವಕಾಶವನ್ನು ಕಲ್ಪಸಲಾಗಿದೆ.

9) ಮೇಲೆ ಓದಲಾದ ಕ್ರಮ ಸಂಖ್ಯೆ (9) ರಲ್ಲಿನ ಸರ್ಕಾರಿ ಆದೇಶದಲ್ಲಿ 1996 ರ ಎಐಸಿಟಿಇ ವೇತನ ಶ್ರೇಣಿಯನ್ನು ದಿನಾಂಕ: 01-04-1999 ರಿಂದ ಜಾರಿಗೆ ಬರುವಂತೆ ಪಾಲಿಟೆಕ್ನಿಕ್ ಬೋಧಕ ವೃಂದಕ್ಕೆ ವಿಸ್ತರಿಸಲಾಗಿದೆ. ಇದರಲ್ಲಿ, ಈಗಾಗಲೇ ಸೇವೆಯಲ್ಲಿರುವ ಕೆಳಕಂಡವರು ಎಐಸಿಟಿಇ ವೇತನ ಶ್ರೇಣಿಗೆ ಅರ್ಹರಾಗಿರುತ್ತಾರೆ. ಆದರೆ ಇವರುಗಳು ದಿನಾಂಕ: 01-04-1999 ರ ಪೂರ್ವದಲ್ಲಿ ನೇಮಕಗೊಂಡಿರಬೇಕು.

(1) ತಾಂತ್ರಿಕ ವಿಷಯಗಳ ಉಪನ್ಯಾಸಕರು ದ್ವಿತೀಯ ದರ್ಜೆ ಪದವಿಯನ್ನು ಹೊಂದಿದ್ದಲ್ಲಿ ಮತ್ತು

(2) ತಾಂತ್ರಿಕೇತರ ವಿಷಯಗಳ ಉಪನ್ಯಾಸಕರು ದ್ವಿತೀಯ ದರ್ಜೆ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದಲ್ಲಿ

10) ಮೇಲೆ ಓದಲಾದ ಕ್ರಮ ಸಂಖ್ಯೆ (10) ರಲ್ಲಿನ ಸರ್ಕಾರಿ ಆದೇಶದಲ್ಲಿ 1996 ರ ಎಐಸಿಟಿಇ ವೇತನ ಶ್ರೇಣಿಯನ್ನು ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ ಬೋಧಕ ವೃಂದಕ್ಕೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಿಸ್ತರಿಸಲಾಗಿದೆ.

(1) ಇವರುಗಳು ದಿನಾಂಕ: 01-04-1993 ಕ್ಕೂ ಪೂರ್ವದಲ್ಲಿ ನೇಮಕಗೊಂಡಿರಬೇಕು

(2) ದ್ವಿತೀಯ ದರ್ಜೆ ಡಿಪ್ಲೋಮಾ ಹೊಂದಿರಬೇಕು

(3) ನಾಲ್ಕು ವರ್ಷಗಳ ಸೇವೆಯನ್ನು ಪೂರೈಸಿರಬೇಕು

11) ಮೇಲೆ ಓದಲಾದ ಕ್ರಮ ಸಂಖ್ಯೆ (11) ರಲ್ಲಿನ ನಿರ್ದೇಶಕರ ಆದೇಶದಲ್ಲಿ ದಿ:17-03-2007 ರ ಆದೇಶವನ್ನು ಆಧರಿಸಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಇವರು ಕೆ ಹೆಚ್ ಕೆ ಅನುದಾನಿತ ಪಾಲಿಟೆಕ್ನಿಕ್, ಧಾರವಾಡ ಸಂಸ್ಥೆಯ ಕೆಳಕಂಡ ತಾಂತ್ರಿಕೇತರ ಸಹಾಯಕ ಉಪನ್ಯಾಸಕರನ್ನು ಉಪನ್ಯಾಸಕರ ಹುದ್ದೆಗೆ ದಿನಾಂಕ: 17-03-2007 ರಿಂದ ಜಾರಿಗೆ ಬರುವಂತೆ ಮೇಲ್ದರ್ಜೆಗೇರಿಸಿ, ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿದೆ.

ಪುಟ-4ಕ್ಕೆ

(1) ಕೆ ಎಂ ರಾಯ್ಕರ್

(2)ಪ್ರತಿಮಾ ಎಂ

12) ಮೇಲಿನ ಕಂಡಿಕೆ 6 ರಲ್ಲಿ ತಿಳಿಸಿರುವಂತೆ, ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಾಂತ್ರಿಕ ವಿಭಾಗದ ಉಪನ್ಯಾಸಕರಿಗೆ ಬಿ ಇ ಪದವಿಯನ್ನು ಮೂಲ ವಿದ್ಯಾರ್ಹತೆಯನ್ನಾಗಿ ನಿಗಧಿಪಡಿಸಿದ್ದು, ತಾಂತ್ರಿಕ ವಿಭಾಗದ ಸಹಾಯಕ ಉಪನ್ಯಾಸಕರು ಬಿ ಇ ಪದವಿಯನ್ನು ಹೊಂದಿದ ದಿನಾಂಕದಿಂದಲೇ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿರುತ್ತದೆ. ಆದರೆ, ಅದೇ ತಾಂತ್ರಿಕೇತರ ವಿಭಾಗದ ಉಪನ್ಯಾಸಕರಿಗೆ ಎಂ.ಕಾಂ / ಎಂ ಲಿಬ್ ಸೈನ್ಸ್ ಸ್ನಾತಕೋತ್ತರ ಪದವಿಯನ್ನು ಮೂಲ ವಿದ್ಯಾರ್ಹತೆಯನ್ನಾಗಿ ನಿಗಧಿಪಡಿಸಿದ್ದು, ಈ ವಿಭಾಗದ ಸಹಾಯಕ ಉಪನ್ಯಾಸಕರು ಈ ವಿದ್ಯಾರ್ಹತೆಯನ್ನು ಅಂದರೆ ಎಂ.ಕಾಂ / ಎಂ ಲಿಬ್ ಸೈನ್ಸ್ ಸ್ನಾತಕೋತ್ತರ ಪದವಿಯನ್ನು ಹೊಂದಿದ ದಿನಾಂಕದಿಂದಲೇ ಜಾರಿಗೆ ಬರುವಂತೆ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸುವ ಬದಲು, ಮೇಲ್ದರ್ಜೆಗೇರಿಸಿದ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ ಎಂದು ತಿಳಿಸುತ್ತಾ, ಒಂದೇ ಇಲಾಖೆಯಲ್ಲಿ ಸಮಾನಾಂತರ (ಉಪನ್ಯಾಸಕರ) ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಮ್ಮನ್ನೂ ಸಹ ಸ್ನಾತಕೋತ್ತರ ಪದವಿಯನ್ನು ಹೊಂದಿದ ದಿನಾಂಕದಿಂದಲೇ ಜಾರಿಗೆ ಬರುವಂತೆ ರಾಜ್ಯ ವೇತನ ಶ್ರೇಣಿಯಲ್ಲಿ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಿ, ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸುವಂತೆ ಸಲ್ಲಿಸಿದ ಮನವಿಯನ್ನು ಪರಿಶೀಲಿಸಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (12) ರ ಪತ್ರದಲ್ಲಿ ಕೆಳಕಂಡಂತೆ ಶಿಫಾರಸು ಸಹಿತದ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1. ಮೇಲೆ ಓದಲಾದ ಕ್ರಮ ಸಂಖ್ಯೆ (5) ಮತ್ತು (6) ರ ಆದೇಶಗಳನ್ವಯ, ಸದರಿ ಉಪನ್ಯಾಸಕರು ಸ್ನಾತಕೋತ್ತರ ಪದವಿಯಾದ ಎಂ.ಕಾಂ / ಎಂ ಲಿಬ್ ಸೈನ್ಸ್ ವಿದ್ಯಾರ್ಹತೆಯನ್ನು ಹೊಂದಿದ ದಿನಾಂಕದಿಂದಲೇ ಅನ್ವಯಿಸುವಂತೆ ರಾಜ್ಯ ವೇತನ ಶ್ರೇಣಿಯಲ್ಲಿ ಸಹಾಯಕ ಉಪನ್ಯಾಸಕರ ಹುದ್ದೆಯಿಂದ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸುವುದು.
2. ಎಐಸಿಟಿಇ ವೇತನ ಶ್ರೇಣಿ ಜಾರಿಗೊಳಿಸಿದ ದಿನಾಂಕ: 18-07-1994 ಮತ್ತು ದಿನಾಂಕ: 28-07-2000 ರ ಆದೇಶಗಳಲ್ಲಿ ಅನುಕ್ರಮವಾಗಿ ದಿನಾಂಕ: 01-04-1993 ರ / 01-04-1999 ರ ಪೂರ್ವದಲ್ಲಿ ನೇಮಕ ಹೊಂದಿದ, ದ್ವಿತೀಯ ದರ್ಜೆ ಸ್ನಾತಕೋತ್ತರ ಪದವಿ ಹೊಂದಿರುವವರಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲು ಅವಕಾಶ ಕಲ್ಪಿಸಿರುವುದರಿಂದ, ಕಂಡಿಕೆ 11 (2) ರಲ್ಲಿ ನಮೂದಿಸಿರುವ <u>ಶ್ರೀಮತಿ ಪ್ರತಿಮಾ</u> ಉಪನ್ಯಾಸಕರು ದಿನಾಂಕ: 01-04-1993 / 01-04-1999 ರ ಪೂರ್ವದಲ್ಲಿ ನೇಮಕಗೊಂಡಿದ್ದು, ದ್ವಿತೀಯ ದರ್ಜೆಯ ಸ್ನಾತಕೋತ್ತರ ಪದವಿಯನ್ನು ಹೊಂದಿದ ದಿನಾಂಕದಿಂದಲೇ ಜಾರಿಗೆ ಬರುವಂತೆ 1986/1996 ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಬಹುದಾಗಿದೆ ಎಂದು ಮತ್ತು ಇವರಿಗೆ 1986/1996 ಎಐಸಿಟಿಇ ವೇತನ ಶ್ರೇಣಿಯನ್ನು ಎಂ ಕಾಂ ಸ್ನಾತಕೋತ್ತರ ಪದವಿ ಹೊಂದಿದ ದಿನಾಂಕದಿಂದ, ಸರ್ಕಾರಿ ಆದೇಶ ಸಂಖ್ಯೆ: ಇಡಿ 319 ಟಿಪಿಇ 2005, ದಿನಾಂಕ:17-03-2007 ರಂತೆ ದಿನಾಂಕ:17-03-2007ರ ಅವಧಿಯವರೆಗೆ ಎಐಸಿಟಿಇ ವೇತನವನ್ನು ಕಾಲ್ಪನಿಕವಾಗಿ ನಿಗಧಿಪಡಿಸಲು ಮತ್ತು

ಪುಟ-5ಕ್ಕೆ

3. ದಿನಾಂಕ: 18-05-2005 ರ ಆದೇಶದಲ್ಲಿ, ದಿನಾಂಕ: 01-04-1993 ರ ಪೂರ್ವದಲ್ಲಿ ತಾಂತ್ರಿಕೇತರ ವಿಭಾಗದಲ್ಲಿ ಉಪನ್ಯಾಸಕರಾಗಿ ನೇಮಕಗೊಂಡು, ಸ್ನಾತಕೋತ್ತರ ಪದವಿಯಲ್ಲಿ ಪಾಸ್ ದರ್ಜೆಯನ್ನು ಮಾತ್ರ ಹೊಂದಿರುವ ಉಪನ್ಯಾಸಕರಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಿರುವಂತೆ, ದಿನಾಂಕ:01-04-1993 ರ ಪೂರ್ವದಲ್ಲೆಯೇ ನೇಮಕಗೊಂಡಿರುವ ಕಂಡಿಕೆ 11 ಅಂಶ (1) ರಲ್ಲಿ ನಮೂದಿಸಿರುವ ಶ್ರೀಮತಿ ಕೆ ಎಂ ರಾಯ್ಕರ್, ಉಪನ್ಯಾಸಕರಿಗೆ ಇವರು ಸ್ನಾತಕೋತ್ತರ ಪದವಿಯನ್ನು (ಪಾಸ್ ದರ್ಜೆ) ಹೊಂದಿದ ದಿನಾಂಕದಿಂದಲೇ ಜಾರಿಗೆ ಬರುವಂತೆ 1986/1996 ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಬಹುದಾಗಿದೆ ಎಂದು ಮತ್ತು ಇವರಿಗೆ 1986/1996 ರ ಎಐಸಿಟಿಇ ವೇತನ ಶ್ರೇಣಿಯನ್ನು ಎಂ ಕಾಂ. ಸ್ನಾತಕೋತ್ತರ ಪದವಿ ಹೊಂದಿದ ದಿನಾಂಕದಿಂದ ದಿನಾಂಕ: 17-03-2007 ರ ಅವಧಿಯವರೆಗೆ ಎಐಸಿಟಿಇ ವೇತನವನ್ನು ಕಾಲ್ಪನಿಕವಾಗಿ ನಿಗಧಿಪಡಿಸಲು.

13) ನಿರ್ದೇಶಕರು, ತಮ್ಮ ಈ ಮೇಲಿನ ಶಿಫಾರಸ್ಸಿಗೆ ಸಮರ್ಥನೆಯಾಗಿ ಕೆಳಕಂಡ ಪೂರಕ ಅಂಶಗಳನ್ನು / ಆದೇಶಗಳನ್ನು ಉದಹರಿಸಿರುತ್ತಾರೆ.

(1) ರಾಜ್ಯ 5 ನೇ ವೇತನ ಆಯೋಗವು, ಹಿಂದಿ ಸಹಾಯಕ ಉಪನ್ಯಾಸಕರ ಹುದ್ದೆಗಳನ್ನು ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸುವ ಸಂಬಂಧ – ಇತರೆ ಭಾಷಾ ಉಪನ್ಯಾಸಕರ ಸಮನಾದ ಕಾರ್ಯದ ಹೊರೆ, ವಿದ್ಯಾರ್ಹತೆಯನ್ನು ಗಮನಿಸಿ, ಆಡಳಿತ ಇಲಾಖೆಯೇ ಈ ಹುದ್ದೆಯನ್ನು ಸಹಾಯಕ ಉಪನ್ಯಾಸಕರ ಹುದ್ದೆಯಿಂದ ಉಪನ್ಯಾಸಕರ ಹುದ್ದೆಗೆ ಉನ್ನತೀಕರಿಸುವುದು ಇಲಾಖೆಯ ವಿವೇಚನೆಗೆ ಒಳಪಟ್ಟಿದೆ ಎಂದು ತಿಳಿಸಿರುತ್ತದೆ. ಇದರ ಆಧಾರದ ಮೇಲೆಯೇ, ಹಿಂದಿ ಸಹಾಯಕ ಉಪನ್ಯಾಸಕರ ಹುದ್ದೆಯನ್ನು ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿರುತ್ತದೆ.

(2)ಶ್ರೀ ಕೆ ಎಲ್ ರವಿಕುಮಾರ್, ಸಹಾಯಕ ಉಪನ್ಯಾಸಕರು (ತಾಂತ್ರಿಕೇತರ/ಪ್ರಸ್ತುತ ತಾಂತ್ರಿಕ)ಇವರಿಗೆ ಕ್ರಮ ಸಂಖ್ಯೆ (6) ರನ್ವಯ ನಿಗಧಿತ ವಿದ್ಯಾರ್ಹತೆ (ಡಿಪ್. ಟಿ ಟಿ) ಹೊಂದಿದ ದಿನಾಂಕದಿಂದಲೇ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಿ ದಿನಾಂಕ: 04-05-1995 ರಲ್ಲಿ ಅಧಿಕೃತ ಜ್ಞಾಪನ ಹೊರಡಿಲಾಗಿದೆ.

(3)ಶ್ರೀ ಸೈಯದ್ ಸಲೀಮುದ್ದೀನ್ ಹಾಗೂ ಇತರೆ ಇಬ್ಬರು ಸಹಾಯಕ ಉಪನ್ಯಾಸಕರು (ತಾಂತ್ರಿಕೇತರ/ಪ್ರಸ್ತುತ ತಾಂತ್ರಿಕ)ಇವರಿಗೆ ಕ್ರಮ ಸಂಖ್ಯೆ (6) ರನ್ವಯ ನಿಗಧಿತ ವಿದ್ಯಾರ್ಹತೆ (ಡಿಪ್. ಟಿ ಟಿ) ಹೊಂದಿದ ದಿನಾಂಕದಿಂದಲೇ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಿ ದಿನಾಂಕ: 23-09-2004 ರಲ್ಲಿ ಅಧಿಕೃತ ಜ್ಞಾಪನ ಹೊರಡಿಲಾಗಿದೆ.

(4)ಶ್ರೀ ರವಿ ಎಂ ಯಮಕನಮರಡಿ, ಸಹಾಯಕ ಉಪನ್ಯಾಸಕರು (ತಾಂತ್ರಿಕ), ಕೆ ಹೆಚ್ ಕೆ ಪಾಲಿಟೆಕ್ನಿಕ್, ಧಾರವಾಡ ಇವರಿಗೆ ಕ್ರಮ ಸಂಖ್ಯೆ (5 ಮತ್ತು 6) ರನ್ವಯ ನಿಗಧಿತ ವಿದ್ಯಾರ್ಹತೆ (ಬಿ.ಇ) ಹೊಂದಿದ ದಿನಾಂಕದಿಂದಲೇ

ಪುಟ-6ಕ್ಕೆ

ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಲು ಸರ್ಕಾರಿ ಪತ್ರ ಸಂಖ್ಯೆ: ಇಡಿ 233 ಟಿಪಿಇ 1997, ದಿನಾಂಕ: 16-12-1997ರಲ್ಲಿ ಅನುಮೋದನೆ ನೀಡಲಾಗಿದೆ.

(5) ತಾಂತ್ರಿಕ ವಿಷಯಗಳ ಸಹಾಯಕ ಉಪನ್ಯಾಸಕರಿಗೆ ಬಿ ಇ ಸ್ನಾತಕ ಪದವಿ ಹೊಂದಿದ ದಿನಾಂಕದಿಂದ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಿದಂತೆ, ತಾಂತ್ರಿಕೇತರ ವಿಷಯಗಳ ಸಹಾಯಕ ಉಪನ್ಯಸಕರನ್ನೂ ಸಹ ಸ್ನಾತಕೋತ್ತರ ಪದವಿ ಹೊಂದಿದ ದಿನಾಂಕದಿಂದ ಉಪನ್ಯಾಸಕರ ಹುದ್ದೆಗೆ ಮೇಲ್ದರ್ಜೆಗೇರಿಸಿದಲ್ಲಿ ತಾಂತ್ರಿಕ ವಿಷಯಗಳ ಮತ್ತು ತಾಂತ್ರಿಕೇತರ ವಿಷಯಗಳ ಉಪನ್ಯಾಸಕರ ಸೇವಾ ಸೌಲಭ್ಯದಲ್ಲಿ ಯಾವುದೇ ತಾರತಮ್ಯ ಇಲ್ಲದಂತಾಗುತ್ತದೆ.

14) ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಹಾಗೂ ಪೂರ್ವಾನ್ವಯವಾಗಿ ನಿಗಧಿಪಡಿಸುವ ಎಐಸಿಟಿಇ ವೇತನದಿಂದಾಗಿ ಯಾವುದೇ ಹಿಂದಿನ ವೇತನ ಬಾಕಿಗೆ ಒತ್ತಾಯಿಸುವುದಿಲ್ಲವೆಂದು, ಯಾವುದೇ ನ್ಯಾಯಾಲಯಗಳಲ್ಲಿ ದಾವೆ ಹೂಡುವುದಿಲ್ಲವೆಂದು ಅಭ್ಯರ್ಥಿಗಳು ಸ್ವಯಂ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ. ಈ ಎಲ್ಲ ವಿವರಗಳ ಹಿನ್ನೆಲೆಯಲ್ಲಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸುತ್ತದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 142 ಟಿಪಿಇ 2016,**
**ಬೆಂಗಳೂರು, ದಿನಾಂಕ:25ನೇ ಫೆಬ್ರವರಿ 2017**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕೆ ಹೆಚ್ ಕೆ ಅನುದಾನಿತ ಪಾಲಿಟೆಕ್ನಿಕ್, ಧಾರವಾಡ ಈ ಸಂಸ್ಥೆಯಲ್ಲಿ ತಾಂತ್ರಿಕೇತರ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದಲ್ಲಿ ಪ್ರಸ್ತುತ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ (1) ಶ್ರೀಮತಿ ಕೆ ಎಂ ರಾಯ್ಕರ್ ಮತ್ತು (2) ಶ್ರೀಮತಿ ಎಂ ಪ್ರತಿಮಾ ಇವರುಗಳು ಎಂ ಕಾಂ ಸ್ನಾತಕೋತ್ತರ ಪದವಿ ಹೊಂದಿದ ದಿನಾಂಕದಿಂದ ಜಾರಿಗೆ ಬರುವಂತೆ ಅವರುಗಳು ಹೊಂದಿದ್ದ ಸಹಾಯಕ ಉಪನ್ಯಾಸಕರ ಹುದ್ದೆಯಿಂದ ಉಪನ್ಯಾಸಕರ (ಗ್ರೂಪ್-ಬಿ) ಹುದ್ದೆಗೆ ರಾಜ್ಯ ವೇತನ ಶ್ರೇಣಿಯಲ್ಲಿ ಮೇಲ್ದರ್ಜೆಗೇರಿಸಿ, 1986 / 1996 ರ ಎಐಸಿಟಿಇ ವೇತನ ಶ್ರೇಣಿಯನ್ನು ಕೆಳಕಂಡ ಷರತ್ತುಗೊಳಪಡಿಸಿ ವಿಸ್ತರಿಸಿ ಆದೇಶಿಸಿದೆ.

1. ಅನುಬಂಧದಲ್ಲಿನ ಶ್ರೀಮತಿ ಎಂ ಪ್ರತಿಮಾ, ಉಪನ್ಯಾಸಕರು, ಇವರು ದಿನಾಂಕ: 01-04-1999 ರ ಪೂರ್ವದಲ್ಲಿ ಸಹಾಯಕ ಉಪನ್ಯಾಸಕರ ಹುದ್ದೆಗೆ ನೇಮಕಗೊಂಡು, ಎಂ.ಕಾಂ. ಸ್ನಾತಕೋತ್ತರ ಪದವಿಯನ್ನು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ ಹೊಂದಿದ ದಿನಾಂಕದಿಂದ ರಾಜ್ಯ ವೇತನ ಶ್ರೇಣಿಯನ್ನು ವಿಸ್ತರಿಸಿ, ದಿನಾಂಕ: 01-04-1999 ರಿಂದ ಅನ್ವಯಿಸುವಂತೆ 1996 ರ ಎಐಸಿಟಿಇ ವೇತನ ಶ್ರೇಣಿಯನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ವಿಸ್ತರಿಸಿ, ದಿನಾಂಕ: 16-03-2007 ರವರೆಗೆ ಮಾತ್ರ ಕಾಲ್ಪನಿಕವಾಗಿ ಎಐಸಿಟಿಇ ವೇತನ ನಿಗಧಿಪಡಿಸುವುದು.

ಪುಟ-7ಕ್ಕೆ

2. ಅನುಬಂಧದಲ್ಲಿನ ಶ್ರೀಮತಿ ಕೆ ಎಂ ರಾಯ್ಕರ್, ಉಪನ್ಯಾಸಕರು ಇವರು ದಿನಾಂಕ: 01-04-1993 ರ ಪೂರ್ವದಲ್ಲಿ ಸಹಾಯಕ ಉಪನ್ಯಾಸಕರ ಹುದ್ದೆಗೆ ನೇಮಕಗೊಂಡು ಎಂ.ಕಾಂ. ಸ್ನಾತಕೋತ್ತರ ಪದವಿಯನ್ನು ಪಾಸ್ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವ ಕಾರಣ, ಇವರಿಗೆ ಸ್ನಾತಕೋತ್ತರ ಪದವಿಯನ್ನು ಉತ್ತೀರ್ಣ ಹೊಂದಿದ ದಿನಾಂಕದಿಂದ ಜಾರಿಗೆ ಬರುವಂತೆ 1986 ರ ಎಐಸಿಟಿಇ ವೇತನ ಶ್ರೇಣಿಯನ್ನು ಮತ್ತು ದಿನಾಂಕ: 01-04-1999 ರಿಂದ ಅನ್ವಯಿಸುವಂತೆ 1996 ಎಐಸಿಟಿಇ ವೇತನ ಶ್ರೇಣಿಯನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ವಿಸ್ತರಿಸಿ, ದಿ:16-03-2007 ರವರೆಗೆ ಮಾತ್ರ 1986/1996 ರ ಎಐಸಿಟಿಇ ವೇತನವನ್ನು ಕಾಲ್ಪನಿಕವಾಗಿ ನಿಗಧಿಪಡಿಸುವುದು.

3. ಅನುಬಂಧದಲ್ಲಿನ ಉಪನ್ಯಾಸಕರು ಎಂ ಕಾಂ. ಸ್ನಾತಕೋತ್ತರ ಪದವಿ ಉತ್ತೀರ್ಣ ಹೊಂದಿದ ದಿನಾಂಕದ ಮೇರೆಗೆ ಸಹಾಯಕ ಉಪನ್ಯಾಸಕರ ಹುದ್ದೆಯಿಂದ ಉಪನ್ಯಾಸಕರ (ಗ್ರೂಪ್-ಬಿ) ಹುದ್ದೆಗೆ ಮೇಲ್ದರ್ಜೆಗೇರಿಸಿದ ದಿನಾಂಕದಿಂದ ದಿನಾಂಕ: 16-03-2007 ರವರೆಗಿನ ಅವಧಿಗೆ ಯಾವುದೇ ಹಿಂಬಾಕಿ ವೇತನವನ್ನು / ಆರ್ಥಿಕ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ. ದಿನಾಂಕ: 17-03-2007 ರಿಂದ ಮಾತ್ರ ಆರ್ಥಿಕ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 605 ಐಎಫ್ (ಬಿ ಮತ್ತು ಎ) 2016, ದಿನಾಂಕ: 09-12-2016 ರಲ್ಲಿ ನೀಡಿರುವ ಅಭಿಪ್ರಾಯ / ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ವೆಂಕಟೇಶ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

**ಇವರಿಗೆ:-**

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು

**ಪ್ರತಿ:-**

1. ಮಹಾಲೇಖಪಾಲರು (ಎ&ಇ, ಲೆಕ್ಕಪರಿಶೋಧನೆ- 1 & 2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಮುಟ-8ಕ್ಕೆ

4. ಪ್ರಾಂಶುಪಾಲರು, ಕೆ ಹೆಚ್ ಕೆ ಅನುದಾನಿತ ಪಾಲಿಟೆಕ್ನಿಕ್, ಧಾರವಾಡ (ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮೂಲಕ)
5. ಸಂಬಂಧಿಸಿದ ಉಪನ್ಯಾಸಕರುಗಳಿಗೆ (ಪ್ರಾಂಶುಪಾಲರು, ಕೆ ಹೆಚ್ ಕೆ ಅನುದಾನಿತ ಪಾಲಿಟೆಕ್ನಿಕ್, ಧಾರವಾಡ ರವರ ಮುಖಾಂತರ).
6. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ : ಒಡಿಜಿಸಿ

# ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ: ಇಡಿ 142 ಟಿಪಿಇ 2016, ದಿನಾಂಕ:25/02/2017**

ಕೆಳಕಂಡ ಉಪನ್ಯಾಸಕರು ಎಂ.ಕಾಂ ಸ್ನಾತಕೋತ್ತರ ಪದವಿಯನ್ನು ಉತ್ತೀರ್ಣ ಹೊಂದಿದ ದಿನಾಂಕದಿಂದ ಜಾರಿಗೆ ಬರುವಂತೆ ಗ್ರೂಪ್-ಬಿ ಉಪನ್ಯಾಸಕರ ಹುದ್ದೆಗೆ ರಾಜ್ಯ ವೇತನ ಶ್ರೇಣಿಯಲ್ಲಿ ಮೇಲ್ದರ್ಜೆಗೇರಿಸುವುದು ಮತ್ತು 1986 / 1996 ರ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಿ, ಆದೇಶ ಸಂಖ್ಯೆ: ಇಡಿ 319 ಟಿಪಿಇ 2005, ದಿನಾಂಕ: 17-03-2007ರ ಸ್ಪಷ್ಟೀಕರಣ ದಿನಾಂಕ: 21-04-2008 ರಂತೆ ದಿನಾಂಕ: 16-03-2007 ರವರೆಗೆ ಮಾತ್ರ ಕಾಲ್ಪನಿಕವಾಗಿ ವೇತನ ನಿಗದಿಪಡಿಸುವುದು.

| ಕ್ರ. ಸಂ. | ಉಪನ್ಯಾಸಕರ ಹೆಸರು / ವಿಭಾಗ ಮತ್ತು ಕರ್ತನಿರ್ವಹಿಸುತ್ತಿರುವ ಸಂಸ್ಥೆ ಶ್ರೀ / ಶ್ರೀಮತಿ | ಸಹಾಯಕ ಉಪನ್ಯಾಸಕರಾಗಿ ನೇಮಕ ಹೊಂದಿದ ದಿನಾಂಕ ಮತ್ತು ಹುದ್ದೆಯನ್ನು ವೇತನ ಅನುದಾನಕ್ಕೆ ಒಳಪಡಿಸಿದ ದಿನಾಂಕ | ಪರಿವೀಕ್ಷಣಾ ಅವಧಿ ಪೂರ್ಣಗೊಂಡ ದಿನಾಂಕ | ಸ್ನಾತಕ ಪದವಿ ಹೊಂದಿದ ದಿನಾಂಕ | ಎಂ.ಕಾಂ ಸ್ನಾತಕೋತ್ತರ ಪದವಿ ಹೊಂದಿದ ದಿನಾಂಕ ಮತ್ತು ದರ್ಜೆ |
|---|---|---|---|---|---|
| 1 | ಎಂ ಪ್ರತಿಮಾ<br>ಉಪನ್ಯಾಸಕರು<br>ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ<br>ಕೆ ಹೆಚ್ ಕೆ (ಅನುದಾನಿತ) ಪಾಲಿಟೆಕ್ನಿಕ್<br>ಧಾರವಾಡ | 01-02-1994 | 31-01-1996 | ಬಿ.ಕಾಂ<br>ಏಪ್ರಿಲ್-1996 | ಎಂ.ಕಾಂ<br>ದ್ವಿತೀಯ ದರ್ಜೆ<br>(ಏಪ್ರಿಲ್-1998)<br>(30-04-1998) |
| 2 | ಕೆ ಎಂ ರಾಯ್ಕರ್<br>ಉಪನ್ಯಾಸಕರು<br>ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ<br>ಕೆ ಹೆಚ್ ಕೆ (ಅನುದಾನಿತ) ಪಾಲಿಟೆಕ್ನಿಕ್<br>ಧಾರವಾಡ | 20-09-1984 | 19-09-1986 | ಬಿ.ಕಾಂ<br>ಏಪ್ರಿಲ್-1996 | ಎಂ.ಕಾಂ<br>ಉತ್ತೀರ್ಣ ದರ್ಜೆ<br>(ಏಪ್ರಿಲ್-1997)<br>(30-04-1997) |

(ಎಸ್.ವೆಂಕಟೇಶ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).